

ಮರಗಳೊಂದಿಗೆ ಬೆಸೆದ ನಂಬಿಕೆಯ ಕೊಂಬೆಗಳು

# ಹುಣಿಸೆಮರದಲ್ಲಿ ದೆವ್ವ ಇರುತ್ತದೆ!

ದೆವ್ವವೆಂಬುದು ಒಂದು ದುರ್ಬಲ ಮನದ ಕಲ್ಪನೆಯಷ್ಟೆ. ಅದು ಯಾವುದೇ ಮರದಲ್ಲಾಗಲೀ, ಬಂಗಲೆಯಲ್ಲಾಗಲೀ ಇರಲು ಸಾಧ್ಯವಿಲ್ಲ. ಆದರೂ ಕೆಲವು ನಂಬಿಕೆಗಳು ಬೆಳೆದು ಬಂದಿರುವುದಕ್ಕೆ ಹಿನ್ನೆಲೆಗಳಂತೂ ಇರುತ್ತವೆ. ಹುಣಿಸೆಮರದ ದೆವ್ವವೂ ಅಂತಹುದೇ.

ಹುಣಿಸೆ ಮರ ಬಹಳ ದಟ್ಟವಾಗಿ ಬೆಳೆಯುವಂತಹ ಮರಗಳಲ್ಲಿ ಒಂದು. ಇದರ ಕೆಳಗೆ ಕುಳಿತರೆ ಹೆಚ್ಚಿನ ಆಮ್ಲಜನಕ ಹೊಂದಿ ಸ್ವಸ್ಥವಾಗಿಯೇ ಇರಬಹುದು. ಆದರೆ ಯಾರೋ, ಎಂದೋ ಇದರಲ್ಲಿ ದೆವ್ವವಿದೆ ಎಂದುದಕ್ಕೆ ಅದೇ ನಿಜವೆನ್ನಲು ಕೆಲವು ಮಂದಿ ಈ ಮರವು ಬಹಳ ಕಡಿಮೆ ಆಮ್ಲಜನಕವನ್ನು ಹೊರಬಿಡುವುದು, ತತ್ಕಾರಣ ಇದರ ಕೆಳಗೆ ಕುಳಿತವರಿಗೆ ಉಸಿರಾಟದ ತೊಂದರೆ ಆಗುವುದು ಎಂಬ ನಿರಾಧಾರವಾದ ನುಡಿಗಳನ್ನು ನುಡಿದಿದ್ದರು. ವಾಸ್ತವವಾಗಿ ರಾಜರ ಕಾಲದಲ್ಲಿ ಹೊಂಗೆ, ಬೇವಿನೊಡನೆ ಹುಣಿಸೆಯ ಮರಗಳನ್ನೂ ಹೆದ್ದಾರಿಗಳ ಇಕ್ಕೆಲಗಳಲ್ಲಿ ನೆಡುತ್ತಿದ್ದುದು ಅವುಗಳ ಆಮ್ಲಜನಕ– ಶ್ರೀಮಂತಿಕೆಯನ್ನು ಮನಗಂಡ ನಂತರವೇ.

### ಹಾಗಿದ್ದರೆ ಈ ದೆವ್ವ?

ಹುಣಿಸೆ ಮರದ ಎಲೆಗಳು, ತೇವವಾಗಿದ್ದಾಗ, ನಾವು ತೊಟ್ಟ ಬಟ್ಟೆಗಳ ಮೇಲೆ ಬಿದ್ದರೆ ಸುಲಭವಾಗಿ ಹೋಗಲಾಡಿಸಲಾಗದಂತಹ ತುಕ್ಕಿನ ಬಣ್ಣದ ಕಲೆಗಳನ್ನು ಉಂಟುಮಾಡುತ್ತವೆ. ಈಗಿನ ಡಿಟರ್ಜೆಂಟ್‌ಗಳು ಆಗಂತೂ ಇರಲಿಲ್ಲ; ಹಾಗಾಗಿ ಹಾಕಿಕೊಂಡ ಬಟ್ಟೆ ಮತ್ತೆ ಹಾಕಿಕೊಳ್ಳಲಾಗದ ಮಟ್ಟ ತಲುಪುತ್ತಿತ್ತು. ಇದನ್ನು ವಿವರಿಸಿ ಹೇಳುವ ಹಾಗೂ ಇದರ ವಿವರವನ್ನು ಕೇಳುವ ವ್ಯವಧಾನ ಹಿರಿಯರಿಗಾಗಲಿ, ಕಿರಿಯರಿಗಾಗಲಿ ಇರುತ್ತಿರಲಿಲ್ಲ. ಬಟ್ಟೆ ಹಾಳಾಗತ್ತೆ, ಅಲ್ಲಿ ಹೋಗಬೇಡಿ ಎಂಬ ಸಣ್ಣ ಕಾರಣಕ್ಕೆ ಮಕ್ಕಳನ್ನು ಹಿಡಿದಿಡುವ ಶಕ್ತಿ ಇರುತ್ತಿರಲಿಲ್ಲ. ಜೊತೆಗೆ ಹಿರಿಯರಿಗೆ ತಾವು ಹೇಳಿದುದನ್ನು ಯಾರೂ ಪ್ರಶ್ನಿಸದೆ ಅನುಸರಿಸಬೇಕೆಂಬ ಒಂದು ಅಹಂಭಾವವೂ ಇರುತ್ತಿತ್ತು. ತೊಟ್ಟ ಬಟ್ಟೆಗಳು ಹಾಳಾದರೆ ಮತ್ತೆ ಮತ್ತೆ ಹೊಸದನ್ನು ತರುವ ಶ್ರೀಮಂತಿಕೆ ಎಲ್ಲರಲ್ಲೂ ಇರುತ್ತಿರಲಿಲ್ಲ. ಹಾಗಾಗಿ ದೆವ್ವವಿದೆ, ಹೋಗಬೇಡ ಎಂದರೆ, ಯಾರೋ ಕೆಲವು ತಲೆತಿರುಕರನ್ನು ಬಿಟ್ಟರೆ ಇನ್ನಾರೂ ಅತ್ತ ಸುಳಿಯುತ್ತಿರಲಿಲ್ಲ. ಬಟ್ಟೆ ಉಳಿಸಲು ಹಿರಿಯರು ಕಂಡುಕೊಂಡ ಉಪಾಯವೇ ದೆವ್ವ!

### ಅರಳಿಮರ ಸುತ್ತಿದರೆ ಮಕ್ಕಳಾಗುತ್ತವೆ!

ಅರಳಿ ಮರ ಬಹಳ ಎತ್ತರಕ್ಕೆ ಬೆಳೆದು ವಿಶಾಲವಾಗಿ ಹರಡಿಕೊಳ್ಳುವ ಮರ. ಈ ಮರದ ಕಡ್ಡಿಗಳನ್ನು ಸಹ ಸಮಿತ್ತುಗಳೆಂದು ಬಳಸುತ್ತಾರೆ. ಈ ಮರವೂ ಸಾಕಷ್ಟು ಪ್ರಮಾಣದಲ್ಲಿ ಆಮ್ಲಜನಕವನ್ನು ಹೊರಹೊಮ್ಮಿಸುತ್ತದೆ.

ಅಂದಿನ ದಿನಗಳಲ್ಲಿ, ಕೆಲವು ಬಂಗಲೆಗಳನ್ನು ಹೊರತುಪಡಿಸಿದರೆ, ಮಿಕ್ಕವು ಸಣ್ಣಸಣ್ಣ ಮನೆಗಳು. ದೊಡ್ಡ ಮನೆಗಳಲ್ಲಿಯೂ ಹೆಂಗಸರು ಬಹಳ ಸಮಯ ಕಳೆಯುತ್ತಿದ್ದದ್ದು ಅಡಿಗೆ ಮನೆಯಲ್ಲಿಯೇ. ಆಗಿನ ಅಡಿಗೆ ಮನೆಗಳ ಕಿಟಕಿಗಳು ಚಿಕ್ಕದಾಗಿರುತ್ತಿದ್ದವು, ಹೊಗೆ ಅಡರುವುದು ಸಾಮಾನ್ಯ ಸಂಗತಿಯಾಗಿತ್ತು. ಹೀಗಾಗಿ, ಆಕ್ಯು ಪ್ರೆಷರ್ ರೀತ್ಯಾ ಕಿವಿ ಮೂಗುಗಳನ್ನು ಚುಚ್ಚಿಸಿಕೊಂಡು ಆಸ್ತಮಾದ ಶಂಕೆ ಕಡಿಮೆಗೊಳಿಸಿಕೊಂಡಿದ್ದರೂ, ಹೊಗೆಯ ದಟ್ಟಣೆ ಹಾಗೂ ಗಾಳಿಯ ಕೊರತೆಗಳಿಂದಾಗಿ ಹೆಚ್ಚಿನ ಹೆಂಗಸರು ಕಾಯಿಲೆ ಬೀಳುತ್ತಿದ್ದರು. ಕಾಯಿಲೆ ಬಿದ್ದಾಗ ಜೀವನದಲ್ಲೇ ಉತ್ಸಾಹವಿರುವುದಿಲ್ಲ, ಪತಿ ಹತ್ತಿರ ಬಂದರೆ ಸಿಡಿಮಿಡಿ; ಪತಿಯೂ ಕಾಯಿಲೆ ತನಗೂ ಹರಡೀತೆಂಬ ಭೀತಿಯಿಂದ ದೂರವಿರುತ್ತಿದ್ದನು.

ಅಂತಹ ಹೆಂಗಸರು ದಿನವೂ ಅರಳಿ ಮರಕ್ಕೆ ಸುತ್ತು ಹಾಕಿದರೆ, ಅಲ್ಲಿನ ಆಮ್ಲಜನಕದ ಸೇವನೆಯಿಂದ ಮನಸ್ಸು ಪ್ರಫುಲ್ಲಗೊಂಡು, ದೇಹದ ಆರೋಗ್ಯ ಸುಧಾರಿಸಿ, ಎಲ್ಲದರಲ್ಲೂ ಆಸಕ್ತಿ ಬೆಳಸಿಕೊಳ್ಳಲೆಂಬ ಆಶಯದಿಂದ ಮರ ಸುತ್ತಿದರೆ ಮಕ್ಕಳಾಗುತ್ತದೆ ಎಂದು ಚುಟುಕಾಗಿ ಹೇಳುತ್ತಿದ್ದರು. ಬರಿದೇ ಮರವನ್ನು ಸುತ್ತು ಎಂದರೆ ಸುತ್ತದಿದ್ದಾರೆಂದು ಅಲ್ಲಿ ಕೆಲವು ನಾಗರ ಕಲ್ಲುಗಳನ್ನು ಇಟ್ಟು, ನಾಗರ ಕಲ್ಲಿಗೆ, ಮರಕ್ಕೆ ಪ್ರದಕ್ಷಿಣೆ ಹಾಕಿದರೆ ಮಕ್ಕಳಾಗುತ್ತವೆ ಎಂದರು. ಆರೋಗ್ಯ ಸುಧಾರಿಸಿದ ಕೆಲವರಿಗೆ ಮಕ್ಕಳಾಗುತ್ತಿದ್ದವು, ನಿಜಕ್ಕೂ ದೋಷವಿದ್ದವರಿಗೆ ಆಗುತ್ತಿರಲಿಲ್ಲ. ಅಲ್ಲಿನ ವಾತಾವರಣದಿಂದ ಸುಧಾರಿತ ಹೆಂಗಸರಿಗೆ ಮಕ್ಕಳಾಗುತ್ತಿದ್ದವೇ ವಿನಹ ವೃಕ್ಷಕ್ಕೂ, ವಂಶವೃಕ್ಷಕ್ಕೂ ಇನ್ನಾವುದೇ ವಿಧವಾದ ಸಂಬಂಧವೂ ಇಲ್ಲ.

■ ವೈ–ಚಾರಿ

